**ದಿನಾಂಕಃ 12.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ . ಸದರಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸತ್ಯವಾಗಿವೆ.

**ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ ಬಿ. ಆರ್.ಡಿ. ವಕೀಲರಿಂದ**

2 ನೇ ಎದುರುದಾರ ನ್ಯಾಯಾಲಯದಲ್ಲಿ ನನಗೆ ಸಾಕ್ಷಿ ನುಡಿಯುವಂತೆ ನೀಡಿರುವ ನಿರ್ದೇಶನದ ಪ್ರತಿ ಹಾಜರು ಮಾಡಿದ್ದೇನೆ, ಅದನ್ನು ನಿ.ಆರ್.1 ಎಂದು ಗುರುತಿಸಲಾಯಿತು. ಅರ್ಜಿದಾರ ನೀಡಿರುವ 2 ಮನವಿ ಪತ್ರಗಳನ್ನು ಹಾಜರು ಮಾಡಿದ್ದೇನೆ, ಅದನ್ನು ನಿ.ಆರ್.2 ಮತ್ತು ನಿ. ಆರ್.3 ಎಂದು ಗುರುತಿಸಲಾಯಿತು. ಈ ಅರ್ಜಿಯ ಅರ್ಜಿದಾರರಿಗೆ 2 ನೋಟೀಸಗಳನ್ನು ನೀಡಲಾಗಿತ್ತು ಎಂದು ತೋರಿಸಲು ಸದರಿ ನೋಟೀಸಿನ ಯಥಾಪ್ರತಿಯನ್ನು ಹಾಜರು ಮಾಡಿದ್ದೇನೆ, ಅವುಗಳನ್ನು ನಿ.ಆರ್.4 ಮತ್ತು ನಿ.ಆರ್.5 ಎಂದು ಗುರುತಿಸಲಾಯಿತು. 2 ಮಹಜರಿನ ಯಥಾಪ್ರತಿಗಳನ್ನು ಹಾಜರು ಮಾಡಿದ್ದೇನೆ, ಅವುಗಳನ್ನು ನಿ.ಆರ್.6 ಮತ್ತು ನಿ.ಆರ್ .7 ಎಂದು ಗುರುತಿಸಲಾಯಿತು. ಅರ್ಜಿದಾರರಿಗೆ ಪರಿಹಾರ ಮೊತ್ತ ನೀಡಿದ್ದನ್ನು ಸದರಿಯವರು ಸ್ವೀಕರಿಸಿಕೊಂಡಿದ್ದಾರೆ ಎಂದು ತೋರಿಸಲು ಸ್ವೀಕೃತಿ ಪತ್ರದ ಯಥಾಪ್ರತಿಯನ್ನು ಹಾಜರು ಮಾಡಿದ್ದೇನೆ, ಅದನ್ನು ನಿ.ಆರ್.8 ಎಂದು ಗುರುತಿಸಲಾಯಿತು. ಗೋಪುರ ಅಳವಡಿಕೆಗೆ ನೀಡಿರುವ ಪರಿಹಾರದ ಬಿಲ್ಲು ಹಾಜರು ಮಾಡಿದ್ದೇನೆ, ಅದನ್ನು ನಿ.ಆರ್.9 ಎಂದು ಗುರುತಿಸಲಾಯಿತು. ಪವರ್ ಲೈನಿನ ಹಾದಿಯಲ್ಲಿ ಹಾನಿಗೊಳಗಾದ ಬೆಳೆ ಮತ್ತು ಮರಗಳಿಗೆ ನೀಡುತ್ತಿರುವ ಪರಿಹಾರದ ಬಿಲ್ಲಿನ ಯಥಾಪ್ರತಿಯನ್ನು ಹಾಜರು ಮಾಡಿದ್ದೇನೆ, ಅದನ್ನು ನಿ.ಆರ್.10 ಎಂದು ಗುರುತಿಸಲಾಯಿತು. ಅರ್ಜಿದಾರ ನೀಡಿರುವ 2 ಸಮ್ಮತಿ ಪತ್ರಗಳನ್ನು ಹಾಜರು ಮಾಡಿದ್ದೇನೆ, ಅವುಗಳನ್ನು ಕ್ರಮವಾಗಿ ನಿ.ಆರ್.11 ಮತ್ತು ನಿ.ಆರ್.12 ಎಂದು ಗುರುತಿಸಲಾಯಿತು. **2** ನಷ್ಟ ಪೂರೈಕೆ ಪತ್ರಗಳನ್ನು ಹಾಜರು ಮಾಡಿದ್ದೇನೆ, ಅವುಗಳನ್ನು ಕ್ರಮವಾಗಿ ನಿ.ಆರ್.13

ಆರ್.ಡಬ್ಲ್ಯೂ. **1**

ಮತ್ತು ನಿ.ಆರ್.14 ಎಂದು ಗುರುತಿಸಲಾಯಿತು. ದಿನಾಂಕ **12.02.2016** ರಂದು ತುಮಕೂರಿನ ಜಿಲ್ಲಾಧಿಕಾರಿಯವರು ಮಾಡಿರುವ ಆದೇಶದ ಯಥಾಪ್ರತಿಯನ್ನು ಹಾಜರು ಮಾಡಿದ್ದೇನೆ, ಅದನ್ನು ನಿ.ಆರ್.15 ಎಂದು ಗುರುತಿಸಲಾಯಿತು. ದಿನಾಂಕ **15.10.2015** ರಂದು ಭಾರತ ಸರ್ಕಾರದ ಮಿನಿಸ್ಟ್ರಿ ಆಫ್ ಪವರ್ ರವರು ಪರಿಹಾರದ ಮೊತ್ತ ವಿತರಣೆಗೆ ಸಂಬಂಧಿಸಿದ ಗೈಡ್ ಲೈನ್ಸ್ ನ ಯಥಾಪ್ರತಿಯನ್ನು ಹಾಜರು ಮಾಡಿದ್ದೇನೆ, ಅದನ್ನು ನಿ.ಆರ್.**16** ಎಂದು ಗುರುತಿಸಲಾಯಿತು. ಅರ್ಜಿದಾರರ ಅರ್ಜಿಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲು ಅರ್ಜಿದಾರರ ಪರ ವಕೀಲರಾದ ಶ್ರೀ ಕೆ. ಆರ್. ಎಂ ವಕೀಲರು ಸಮಯ ಬೇಡಿರುವುದರಿಂದ ಮುಂದೂಡಲಾಗಿದೆ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ. ಹೇಳಿ. ಕೇಳಿ.ಸರಿ. ಇದೆ

**6** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ತುಮಕೂರು